ವಿವರಿಸುತ್ತಾರೆ. ಮೊದಲಿಗೆ ಧರ್ಮದ ವಿಚಾರಗಳನ್ನೇ ತೆಗೆದುಕೊಳ್ಳಬಹುದು. ಧರ್ಮವೆಂಬುದು ತತ್ವಧಾರಿತವಾಗಿರಬೇಕು ಅದು ಯಾವಾಗ ತತ್ವಗಳನ್ನು ಬಿಟ್ಟು ನೀತಿ ನಿಯಮಗಳಾಗಿ ಪರಿವರ್ತನೆಯಾಗಿ ಬಿಡುತ್ತದೋ ಆಗ ಅದು ಧರ್ಮವಾಗಿ ಉಳಿಯದೆ, ನೀತಿ ನಿಯಮಗಳನ್ನು ಹೇರಿ ಸಮಾಜವನ್ನು ಒಡೆಯುತ್ತದೆ. ಮನುಷ್ಯ ಸಂಬಂಧಗಳನ್ನು ಹಾಳುಮಾಡುತ್ತದೆ. ಧರ್ಮಕ್ಕೆ ಮಾನವ ಸಮಾಜವನ್ನು ಒಂದುಗೂಡಿಸುವ ಶಕ್ತಿ ಇದೆ. ಆದರೆ ಅದು ನೀತಿ ನಿಯಮಗಳನ್ನು ಮಾಡಲು ತೊಡಗಿದರೆ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡು ಅಧಾರ್ಮಿಕವಾದ ಕೆಲಸಕಾರ್ಯಗಳಲ್ಲಿ ತೊಡಗುತ್ತದೆ. ಆದ್ದರಿಂದಲೇ ಹಿಂದೂ ಧರ್ಮವು ನೀತಿ ನಿಯಮಗಳ ಕಟ್ಟು–ಕಟ್ಟಲೆಗಳ ಧರ್ಮವಾಗಿ ತಾನು ನಿರ್ವಹಿಸಬೇಕಾದ ಹೊಣೆಗಾರಿಕೆಯನ್ನು ನಿರ್ವಹಿಸದೆ, ಒಂದು ರೀತಿಯಲ್ಲಿ ಸ್ಥಗಿತಗೊಳಿಸಿದ ಸಂಸ್ಕೃತಿಯನ್ನು ಹುಟ್ಟುಹಾಕಿಬಿಟ್ಟಿದೆ. ಸ್ಥಗಿತಗೊಂಡ, ಸ್ಥಾವರವಾದ ಸಂಸ್ಕೃತಿಯಲ್ಲಿ ಮಾನವೀಯ ಮೌಲ್ಯಗಳನ್ನು ಪೋಷಿಸುವಂತಹ ಗುಣಗಳಿರುವುದಿಲ್ಲ. ಯಾವ ಧರ್ಮ ಮನುಷ್ಯನ ಮಧ್ಯೆ ಅಡ್ಡಗೋಡೆಗಳನ್ನು ನಿರ್ಮಿಸಿ ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಳ್ಳುವಂತೆ ನೀತಿ ನಿಯಮಗಳನ್ನು ಕಟ್ಟು–ಕಟ್ಟಲೆಗಳನ್ನು ರೂಪಿಸಿಕೊಳ್ಳುತ್ತದೆಯೋ ಅದು ತನ್ನ ಚಲನಶೀಲತೆಯನ್ನು ಕಳೆದುಕೊಂಡು ಸ್ಥಾವರವಾಗುತ್ತದೆ. ಅಂತಹ ಧರ್ಮ ಧರ್ಮವಾಗುವುದಿಲ್ಲ. ಆದ್ದರಿಂದಲೇ ಭಾರತೀಯ ಸಂಸ್ಕೃತಿಯ ಆಧಾರ ಸ್ಥಂಭಗಳೆನಿಸಿಕೊಂಡಿರುವ ವೇದಗಳು, ಸ್ಮೃತಿಗಳು ಹಾಗೂ ಕೆಲವು ಪುರಾಣಗಳನ್ನು ಟೀಕಿಸಿ ಅವುಗಳ ವಿರುದ್ಧ ಅಂಬೇಡ್ಕರ್ ಬಂಡಾಯವೇಳುತ್ತಾರೆ.



ಅಂಬೇಡ್ಕರ್ ಅವರು 'ಸಂಸ್ಕೃತಿ' ಎಂಬ ಪದವನ್ನು ಅರ್ಥೈಸಿಕೊಂಡಿರುವುದು ಹೊಣೆಗಾರಿಕೆ, ಜವಾಬ್ದಾರಿ, ಸಮಾನತೆ, ಸೋದರತ್ವ, ಸಹಬಾಳ್ವೆ ಎಂಬ ನೆಲೆಗಳಲ್ಲಿ. 'ಮಾನವ ನಿರ್ಮಿತ ಪರಿಸರವೇ ಸಂಸ್ಕೃತಿ' ಎಂಬ ಮಾನವಶಾಸ್ತ್ರಜ್ಞರ ವ್ಯಾಖ್ಯಾನದ ಸಮೀಪಕ್ಕೆ ಅಂಬೇಡ್ಕರ್ ಅವರ 'ಸಂಸ್ಕೃತಿ' ನಿರ್ವಚನ ಬರುತ್ತದೆ.

ಅಂಬೇಡ್ಕರ್ ಅವರ ಈ ಬಗೆಯ 'ಸಂಸ್ಕೃತಿ' ವಿಶ್ಲೇಷಣೆ ರೂಪುಗೊಂಡಿದ್ದು ವೈಚಾರಿಕ ಸಾಹಿತ್ಯದಲ್ಲಿ. ನವೋದಯ, ನವ್ಯ, ಪ್ರಗತಿಶೀಲರಲ್ಲಿಯೂ ಅಂಬೇಡ್ಕರ್ ಪ್ರಭಾವ ಆಗಿದೆ. ಆದರೆ ಅವರು ಅಂಬೇಡ್ಕರ್ ಹೆಸರು ಹೇಳುವುದಿಲ್ಲ. ಆದರೆ 1979ರ ನಂತರ ಅಂಬೇಡ್ಕರ್ ಅವರ ಚಿಂತನೆಗಳ ಪ್ರಭಾವ ವೈಚಾರಿಕ ಸಾಹಿತ್ಯಗಳ ಮೇಲೆ ಅಪಾರವಾದ ಪ್ರಭಾವ ಆಗಿದೆ. ದಲಿತ ಬಂಡಾಯ ಲೇಖಕರು 'ಸಂಸ್ಕೃತಿ ಅಧ್ಯಯನ', 'ಸಾಮಾಜಿಕ ಅಧ್ಯಯನ' ಎಂಬ ಶೀರ್ಷಿಕೆಗಳ ಅಡಿಯಲ್ಲಿ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಅಂಬೇಡ್ಕರ್ ಅವರ ಚಿಂತನೆಗಳ ಪ್ರಭಾವ ಗುರುತಿಸಬಹುದು. 1979ರ ನಂತರ ದಲಿತ ಬಂಡಾಯದ ಕತೆ, ಕಾದಂಬರಿ, ಕಾವ್ಯ, ನಾಟಕ, ಆತ್ಮಕತೆ, ವಿಮರ್ಶೆ, ವೈಚಾರಿಕ ಲೇಖನಗಳಲ್ಲಿ ಅಂಬೇಡ್ಕರ್ ಅವರ ಪ್ರಭಾವ ದಟ್ಟವಾಗಿರುವುದನ್ನು